ಅ) 2 ಜಲಸಂಗ್ರಹಾಗಾರಗಳಲ್ಲಿ 1 ಜಲಸಂಗ್ರಹಾಗಾರವನ್ನು ನಿರ್ಮಾಣ ಮಾಡಲಾಗಿದ್ದು ನೆಹರು ನಗರದಲ್ಲಿನ ಜಲಸಂಗ್ರಹಾಗಾರವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ವಿದ್ಯುತ್ ಸೌಲಭ್ಯ ಕಲ್ಪಿಸಲಾಗಿದೆ.

ಇ) ನೆಹರು ನಗರ ಬಡಾವಣೆಯನ್ನು ಹೊರತುಪಡಿಸಿ ಉಳಿದ ಯಾವ ಪ್ರದೇಶಕ್ಕೂ ನೀರಿನ ತೊಂದರೆಯಾಗಿರುವುದಿಲ್ಲ.

ಈ) ನೆಹರು ನಗರದಲ್ಲಿ ಜಲಸಂಗ್ರಹಾಗಾರ ನಿರ್ಮಾಣ ಮಾಡಲು ಈಗ ನಿವೇಶನ ಒದಗಿಸಿರುವುದರಿಂದ ಅತೀ ಶೀಘ್ರವಾಗಿ ಜಲಸಂಗ್ರಹಾಗಾರ ನಿರ್ಮಾಣ ಮಾಡಿ ನೀರಿನ ತೊಂದರೆಯನ್ನು ಪರಿಹರಿಸಲಾಗುವುದು.

ಉ) ಈ ಯೋಜನೆಯನ್ನು ಈ ಕೆಳಕಂಡ ಹಣಕಾಸಿನ ವ್ಯವಸ್ಥೆಯಲ್ಲಿ ಕೈಗೊಂಡಿದೆ.

ಕೇಂದ್ರ ಸರ್ಕಾರದ ಪಾಲು	ರೂ. 106.63 ಲಕ್ಷಗಳು
ಕರ್ನಾಟಕ ಸರ್ಕಾರದ ಪಾಲು	ರೂ. 153.37 ಲಕ್ಷಗಳು
ಒಟ್ಟು	ರೂ. 260.00 ಲಕ್ಷಗಳು

ಈ ಯೋಜನೆಗೆ ಡಿಸೆಂಬರ್ 2004ರ ಅಂತ್ಯದವರೆಗೆ ರೂ. 312.37 ಲಕ್ಷಗಳು ವೆಚ್ಚವಾಗಿದೆ.

223 (942) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯ ವಿವಿಧ ಇಲಾಖೆಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಲೋಕಾಯುಕ್ತರಿಂದ ವರದಿಯಾಗಿದೆಯೇ;

ಆ) ಲೋಕಾಯುಕ್ತದವರು ದಾಳಿ ನಡೆಸಿ ತನಿಖೆ ಮಾಡಿ ವರದಿ ಮಾಡಿರುವುದು ನಿಜವೇ;

ಇ) ನಿಜವಿದ್ದಲ್ಲಿ, ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಭ್ರಷ್ಟಾಚಾರದ ಅಕ್ರಮಗಳು ಕಂಡು ಬಂದಿರುತ್ತವೆ;

ಈ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಮತ್ತು ಆ) ದಿನಾಂಕ 27.10.2004 ರಂದು ಲೋಕಾಯುಕ್ತರು ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ವಿವಿಧ ಕಛೇರಿಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿರುತ್ತಾರೆಂದು ತಿಳಿದುಬಂದಿದೆ. ಈ ಬಗ್ಗೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದನ್ವಯ ಸರ್ಕಾರಕ್ಕೆ ಯಾವುದೇ ವರದಿ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.